ಪದಬಂಧ




ಎಡದಿಂದ ಬಲಕ್ಕೆ:

1. ಸಂಪ್ರದಾಯವನ್ನು ಪಾಲಿಸಲು ತಂದ ಅಲಂಕಾರ ಸಾಮಗ್ರಿ (4)
3. ಸರ್ಪವನ್ನೇರಿದ ಊರು ಅದೇಕೋ ಹಿಂದು ಮುಂದು (3)
4. ಕೂಗು ಹಾಕಿ ಕರೆದದ್ದಕ್ಕೆ ವ್ಯಂಗ್ಯವಾಡುವುದೇಕೆ? (3)
6. ಭಕ್ಷಕರನ್ನೆಲ್ಲ ದೂರವಿಟ್ಟು ಕಾಪಾಡುವ ಶಕ್ತಿ (4)
7. ಸಂಪತ್ತನ್ನು ಕಳೆದುಕೊಂಡವನಿಗೆ ಸಮಾಧಾನದ ಮಾತು (3)
9. ಸುಣ್ಣವನ್ನು ಹಚ್ಚುವುದೇ? ಅದು ಸಾಂಬಾರ ಕಾಳು (3)
11. ದೊರೆ ಮನೆಯವರ ಮೈಯಲ್ಲೂ ಎಲ್ಲರಂಥದೇ ರಕ್ತ (3)
13. ಹಂಗನ್ನು ತೊರೆದು ಬರುವ ತಂತ್ರ ಅರ್ಥವಾಗುವಂತಿಲ್ಲ (3)
15. ಬಾವಿಯನ್ನು ತೋಡುವುದರಲ್ಲಿ ಆತನಿಗೆ ಪರಿಶ್ರಮ ಇದೆ (4)
17. ಪರರಿಗೆಂದು ನಿಗದಿಯಾಗಿದ್ದ ಸಂಬಳ ತಿರುಗಾ ಮುರುಗಾ (3)
18. ಬಣ್ಣಿಸಲಾರದಷ್ಟು ಸುಂದರ, ನಕ್ಷತ್ರದಂಥ ಡಬ್ಬಿ (3)
19. ತೇರನ್ನೇರಿಸಿ ದೇವರ ಮೆರವಣಿಗೆ, ಹಬ್ಬ (4)

ಮೇಲಿಂದ ಕೆಳಕ್ಕೆ:

1. ಪರಿಹಾರ ಕೋರಿ ಬಂದರೆ ಏಟು ಹಾಕುವುದೇ? (3)
2. ಕೊಲ್ಲುವವನಲ್ಲ ಬಿಡಿ, ಆ ಪಾಂಡವ (3)
3. ರುಜುವಾತು ಮಾಡುವಾಗ ಎಂಥ ಪ್ರಾಮಾಣಿಕತೆ! (3)
5. ಕೂಲಿಯ ಹಣವನ್ನೆಲ್ಲ ಬಳಸಿ ಶುಭಕಾರ್ಯ (3)
7. ಬರೀ ಬೋರು. ಎಲ್ಲ ಸಂದರ್ಭಕ್ಕೂ ಅದೇ ತರಕಾರಿ (3)
8. ಈಶ್ವರನದೇ ಇಚ್ಛೆ. ಯಾವುದೂ ಶಾಶ್ವತ ಅಲ್ಲ (3)
9. ಮುಗ್ಧನಷ್ಟೇ ಅಲ್ಲ. ಸ್ವಲ್ಪವೂ ಧೈರ್ಯವಂತನೂ ಅಲ್ಲ (3)
10. ಮುನಿಸು ಇಲ್ಲದಿದ್ದರೆ ಸಾಕು– ಅದೇ ಹಿಗ್ಗು (3)
12. ದರ್ಪಕ್ಕೆ ಹೆದರದೆ ವಿರೋಧದ ಕೂಗು (3)
14. ಹಣ್ಣಿನ ತೋಟಕ್ಕೆ ಅಡಿಯಿರಿಸಿತು ಜಿಂಕೆ (3)
15. ಅಪೂರ್ವವಾದದ್ದು ಸರಿ. ಅದರ ಕಾಲಾನಂತರದ್ದು? (3)
16. ಭವ್ಯತೆ ಇಲ್ಲದಿದ್ದರೂ ವಿಪರೀತ ಆಡಂಬರ (3)

## 16–1–14ರ ಉತ್ತರಗಳು

ಎಡದಿಂದ ಬಲಕ್ಕೆ:

1. ಅಧ್ಯಯನ; 3. ಪ್ರಚಂಡ; 4. ವಿಕ್ರಮ; 6. ಗುಡಿಸಿಲು; 7. ಅವಸರ; 9. ಕಾಲುಭಾಗ; 11. ತಿಲಾಂಜಲಿ; 13. ರಿಣಭಾರ; 15. ಮಾಯಾಬಿಂಬ; 17. ಕರ್ತಾರ; 18. ಸಂಕೋಚ; 19. ಕಲಾವಂತ.

ಮೇಲಿಂದ ಕೆಳಕ್ಕೆ:

1. ಅಡಗು; 2. ನವಿಲು; 3. ಪ್ರವಾಸ; 5. ಮಹಲು; 7. ಅಧೋಗತಿ; 8. ರಥಗಾಲಿ; 9. ಕಾವಿಧಾರಿ; 10. ಗಡಿಯಾರ; 12. ಜಳಕ; 14. 'ಣರಚ' (ಚರಣ ಅಡಿಮೇಲು); 15. ಮಾರಕ; 16. ಬಸಂತ.

# ಪ್ರಶ್ನಾಂಕಣ

## ಊಲ್ರಾ–ಅದೇನು?

ಊಲ್ರಾ– ಅದೊಂದು ಏಕ ಶಿಲಾ ಶಿಲ್ಪ; ಪ್ರಕೃತಿಯೇ ನಿರ್ಮಿಸಿರುವ ಪರಮ ಸೋಜಿಗದ ಶಿಲ್ಪ. ಆಸ್ಟ್ರೇಲಿಯಾ ಖಂಡದ ಒಂದು ವಿಸ್ತಾರ ಬಯಲಲ್ಲಿ, ಅಲ್ಲಿನ ಬಿಸಿ ಬಿಸಿ ಮರುಭೂಮಿ ಪರಿಸರದಲ್ಲಿ ತಲೆ ಎತ್ತಿ ನಿಂತಿರುವ ಈ ವಿಸ್ಮಯದ ಸೃಷ್ಟಿ ಇಡೀ ಧರೆಯಲ್ಲೇ ಅಸದೃಶ. 'ಆಯರ್ಸ್ ರಾಕ್' ಎಂದೂ ಹೆಸರಾಗಿರುವ ಈ ಮಹಾನ್ ಬಂಡೆ ಶಿಲ್ಪ ಸಹಜವಾಗಿಯೇ ಒಂದು ಸುಪ್ರಸಿದ್ಧ ಪ್ರವಾಸೀ ಆಕರ್ಷಣೆ ಕೂಡ. ಎಷ್ಟೆಂದರೆ ಈ ಬೃಹತ್ ಏಕಶಿಲೆಯನ್ನು, ಹಗಲಿನುದ್ದಕ್ಕೂ ಮಾಯಾಮಯವಾಗಿ ಬದಲಾಗುವ ಅದರ ವರ್ಣ ವೈಭವವನ್ನು ವೀಕ್ಷಿಸಲೆಂದು ಪ್ರತಿ ವರ್ಷ ಕನಿಷ್ಠ ಐದು ಲಕ್ಷ ನಿಸರ್ಗಾಸಕ್ತ ಪ್ರವಾಸಿಗರು ಅದರೆದುರು ನಿಲ್ಲುತ್ತಾರೆ.

ಏಕ ಶಿಲಾ ಶಿಲ್ಪ ಆಗಿದ್ದರೂ ಊಲ್ರಾದ ಗಾತ್ರ ಸಾಮಾನ್ಯದ್ದೇನಲ್ಲ. ಒಂದೇ ಬಂಡೆಯಾದರೂ ಅದರದು ಬೆಟ್ಟದಂತಹ ಗಾತ್ರ. ಊಲ್ರಾದ ಅಡ್ಡಳತೆ ಮೂರು ಕಿ.ಮೀ.; ಅದರ ಸುತ್ತಳತೆ ಹತ್ತು ಕಿ.ಮೀ.; ಎತ್ತರ ಮುನ್ನೂರ ಎಂಬತ್ತು ಮೀಟರ್ (1140 ಅಡಿ). ಅದು ತಲೆ ಎತ್ತಿ ಐವತ್ತು ಕೋಟಿ ವರ್ಷ ಕಳೆದಿದೆ. ಹಾಗಾಗಿ ನೈಸರ್ಗಿಕ ಶಿಥಿಲೀಕರಣದಿಂದಾಗಿ ಈ ಬಕ್ಕ ಬಂಡೆಯ ಮೈಯಲ್ಲಿ ಉಬ್ಬು–ತಗ್ಗುಗಳು, ಹಳ್ಳ–ಕೊಳ್ಳಗಳು, ಬಿರುಕು–ಕೊರಕಲುಗಳು ಹೇರಳವಾಗಿವೆ.

ಊಲ್ರಾದ ವೈಶಿಷ್ಟ್ಯ ವಾಸ್ತವವಾಗಿ ಅದರ ರೂಪ–ಗಾತ್ರಗಳಿಗೆ ಸಂಬಂಧಿಸಿಲ್ಲ. ಅದರ ಪ್ರಧಾನ ಆಕರ್ಷಣೆ ಇರುವುದೇ ಅದರ ವರ್ಣ ಪ್ರದರ್ಶನದಲ್ಲಿ. ಈ ಬಂಡೆ ಶಿಲ್ಪ ಬೆಳಗಿನಿಂದ ಬೈಗಿನವರೆಗೆ ಭಿನ್ನ ಭಿನ್ನ ಬಣ್ಣ ಬೆಡಗುಗಳನ್ನು ಪ್ರದರ್ಶಿಸುತ್ತದೆ (ಚಿತ್ರ ನೋಡಿ). ಬೆಳಗಿನಲ್ಲಿ ಕಿತ್ತಳೆ ವರ್ಣ, ಮಧ್ಯಾಹ್ನದಲ್ಲಿ ಗಾಢ ಕೆಂಪು ಬಣ್ಣ, ಸಂಜೆಯಲ್ಲಿ ಕೆಂಡದಂಥ ಉಜ್ವಲ ವರ್ಣ




ಇತ್ಯಾದಿ. ಹೀಗೆ ಹಗಲಿನುದ್ದಕ್ಕೂ ಹತ್ತಾರು ವಿಧಗಳ, ಸ್ಪಷ್ಟ ವಿಭಿನ್ನತೆಯ ವರ್ಣದುಡುಗೆ ಧರಿಸುವುದೇ ಊಲ್ರಾದ ವಿಶೇಷ.

ಊಲ್ರಾದ ಈ ವರ್ಣ ವೈವಿಧ್ಯಕ್ಕೆ ಕಾರಣ ಏನು? ಅದೇನೆಂದರೆ ಊಲ್ರಾ ಆಕಸ್ಮಿಕವಾಗಿ ಅತ್ಯಪರೂಪದ ಯೋಗಾಯೋಗದಿಂದಾಗಿ ಹಲವು ವಿಧಗಳ ಶಿಲೆಗಳ ಮಿಶ್ರಣದಿಂದ ಮೈದಳೆದಿದೆ. ಊಲ್ರಾದಲ್ಲಿ ಅಗ್ನಿ ಶಿಲೆಗಳ ಅಂಶಗಳಷ್ಟೇ ಅಲ್ಲದೆ ಮರಳು ಶಿಲೆಯಂಥ ಪದರ ಶಿಲೆಗಳು ಮತ್ತು ಅಮೃತ ಶಿಲೆಯಂಥ ರೂಪಾಂತರ ಶಿಲೆಗಳೂ ಬೆರೆತಿವೆ. ಈ ನಾನಾ ವಿಧ ಶಿಲೆಗಳಲ್ಲಿನ ಹೇರಳ ಖನಿಜಗಳು ಅವುಗಳ ವಿಭಿನ್ನ ದ್ಯುತಿ ಸಂವೇದೀ ಸ್ವಭಾವಗಳಿಂದ ತಮ್ಮ ಮೇಲೆ ಬೀಳುವ ಸೌರ ಬೆಳಕಿನ ವಿವಿಧ ತರಂಗಾಂತರಗಳನ್ನು ವಿವಿಧ ಪ್ರಮಾಣಗಳಲ್ಲಿ ಹೀರುತ್ತವೆ, ಪ್ರತಿಫಲಿಸುತ್ತವೆ, ಚದರಿಸುತ್ತವೆ. ಒಟ್ಟಾರೆ ಪರಿಣಾಮವಾಗಿ ಊಲ್ರಾದ ವರ್ಣಸ್ವರೂಪ ಬದಲಾಗುತ್ತ ಹೋಗುತ್ತದೆ.

■ ಎನ್. ವಾಸುದೇವ್